ಜಿಲ್ಲೆಯ ರೈತರ ಹಾಗೂ ವರ್ತಕರ ಹೆಚ್ಚಿನ ಸಂಪರ್ಕ ಈ ಜಿಲ್ಲೆಗಳಲ್ಲಿರುವುದರಿಂದ ಆಮ್ಲವನ್ನು ಕೊಂಡುಕೊಂಡು ಬಂದು ಕೆಲವು ರೈತರು ಉಪಯೋಗಿಸುತ್ತಾರೆ. ಒಟ್ಟಿನಲ್ಲಿ ಜಿಬ್ಸಾಲಿಕ್ ಆಮ್ಲ ಹೆಚ್ಚಾಗಿ ದ್ರಾಕ್ಷಿ ಬೆಳೆಯುವ ಪ್ರದೇಶಗಳಲ್ಲಿ ಸಿಗುವುದರಿಂದ ದ್ರಾಕ್ಷಿ ಬೆಳೆಗಾರರಿಗೆ ಈ ಆಮ್ಲದ ಬಗ್ಗೆ ಯಾವ ಕೊರತೆಯೂ ಇದುವರೆಗೆ ಉದ್ಭವಿಸಿರುವುದಿಲ್ಲ. ಹಾಗೆ ಏನಾದರೂ ಇದು ದೊರೆಯುವ ಬಗ್ಗೆ ಬಿಜಾಪುರದಲ್ಲಿ ಕಷ್ಟವಿದ್ದ ಪಕ್ಷದಲ್ಲಿ ಇಲಾಖೆಯೂ ರೈತರಿಗೆ ಬೇಕಾದಷ್ಟು ಪ್ರಮಾಣದಲ್ಲಿ ಸೂಕ್ತ ಸಮಯದಲ್ಲಿ ಸರಬರಾಜು ಮಾಡುವ ವ್ಯವಸ್ಥೆ ಮಾಡಲು ಹಿಂದರಿಯುವುದಿಲ್ಲ. ಇದರ ಬಗ್ಗೆ ಕರ್ನಾಟಕ ಕೃಷಿ ಕೈಗಾರಿಕಾ ನಿಗಮಗಳೂ ಸಹ ಬರೆದು ಆ ಆಮ್ಲವನ್ನು ವಿತರಿಸಲು ಏನಂತಿಸಿಕೊಳ್ಳಲಾಗುವುದು.

೩. ದ. ಕ. ಜಿಲ್ಲೆಯ ಪಂಚಾಯತ್ ನೌಕರರು ತಮ್ಮ ಬೇಡಿಕೆಗಳಿಗೆ ಧರಣಿ ಮುಷ್ಕರ ಹೂಡಿರುವುದು

ಶ್ರೀಮತಿ ಮನೋರಮ ಮಧ್ವರಾಜ್.—ಸನ್ಮಾನ್ಯ ಸಭಾಧ್ಯಕ್ಷರೆ, ದಕ್ಷಿಣ ಕನ್ನಡ ಜಿಲ್ಲೆಯ ಪಂಚಾಯಿತಿಗಳಲ್ಲಿ ಸುಮಾರು ೧೦-೧೨ ವರ್ಷಗಳಿಂದ ಕೆಲಸ ಮಾಡುತ್ತಿರುವ ಗುಮಾಸ್ತರು, ವಸೂಲಿಗಾರರು, ಪೇದೆ, ಜಾಡಮಾಲಿ, ನೀರು ನಿಯಂತ್ರಕರು, ಬಾಲವಾಡಿ ಶಿಕ್ಷಕಿಯರು ಹಾಗೂ ಇತರ ನೌಕರರಿಗೆ ಸೂಕ್ತ ವೇತನ ಮತ್ತು ಸೇವಾ ಭದ್ರತೆಗಳಿಲ್ಲದೆ ಇರುವ ಬಗ್ಗೆ, ಸರಕಾರದವರು ಭರವಸೆ ನೀಡಿದ್ದಾಗ್ಯೂ ಈವರೆಗೂ ಯಾವುದೇ ಕ್ರಮ ಕೈಗೊಳ್ಳದಿರುವುದರಿಂದ, ಈಗ ಮಂಡಲಪಂಚಾಯಿತಿಗಳಲ್ಲಿ ಅನುಭವವಿರುವ ನೌಕರರುಗಳಿಗೆ ಸೂಕ್ತ ಬಡ್ತಿ ಹಾಗೂ ಪ್ರಾತಿನಿಧ್ಯ ನೀಡಬೇಕೆಂದು ಸದರಿ ನೌಕರರು ೯-೩-೧೯೮೭ರಿಂದ ವಿಧಾನಸೌಧದ ಮುಂದೆ ಧರಣಿ ನಡೆಸುತ್ತಿದ್ದು ಪರಿಸ್ಥಿತಿ ವಿಕೋಪಕ್ಕೆ ಹೋಗುವ ಮುಂಚೆ ಸೂಕ್ತ ಕ್ರಮ ಕೈಗೊಂಡು ೧೦-೧೨ ವರ್ಷಗಳಿಂದ ಕೆಲಸ ಮಾಡುತ್ತಿರುವ ಪಂಚಾಯಿತಿ ನೌಕರರಿಗೆ ಸೂಕ್ತ ಪ್ರಾತಿನಿಧ್ಯ ನೀಡಬೇಕೆಂದು ಸರಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಉತ್ತರ ಇನ್ನೂ ಬಂದಿಲ್ಲ. ಮಾನ್ಯ ಮುಖ್ಯಮಂತ್ರಿಗಳಿಂದ ಅದನ್ನು ನಂತರ ತರಿಸಿಕೊಡುತ್ತೇವೆ.

೪. ಮಂಗಳೂರಿನ ಹೊಸ ಬಸ್ ನಿಲ್ದಾಣದಲ್ಲಿ ಅವಶ್ಯಕ ಸೌಲಭ್ಯಗಳ ವ್ಯವಸ್ಥೆ

೧-೦೦ ಪಿ. ಎಂ.

† ಶ್ರೀ ಬಿ. ಎಂ. ಇದಿನಬ್ಬ.—ಸನ್ಮಾನ್ಯ ಸಭಾಧ್ಯಕ್ಷರೆ, ಕೆ.ಎಸ್.ಆರ್.ಟಿ.ಸಿ.ಯವರು ಮಂಗಳೂರಿನಲ್ಲಿ ಹೊಸ ಬಸ್ ನಿಲ್ದಾಣವನ್ನು ನಿರ್ಮಿಸಿ ಈಚೆಗೆ ಅದರ ಉದ್ಘಾಟನೆಯೂ ಆಯಿತು. ಆದರೆ ಅಲ್ಲಿ ಕೆಲವೊಂದು ಆತಂಕಗಳು ಎದುರಾಗಿ ತುಂಬಾ ತೊಂದರೆಯಾಗಿರುತ್ತದೆ. ಬಸ್ ನಿಲ್ದಾಣದಲ್ಲಿ ಮಂಜಾನೆ ರಿಕ್ಷಾ ಇನ್ನಿತರ ವಾಹನಗಳ ಅಡ್ಡಾದಿಡ್ಡಿ ಪಾರ್ಕಿಂಗ್‌ನಿಂದ ಸಾರ್ವಜನಿಕರಿಗೆ, ಇನ್ನಿತರ ದ್ವಿಚಕ್ರ ವಾಹನದವರಿಗೆ ನಿಲ್ದಾಣ ಪ್ರವೇಶಿಸಲು ತುಂಬಾ ಆತಂಕವಾಗಿರುತ್ತದೆ. ವಾಹನಗಳು ಎಲ್ಲಿ ನಿಲ್ಲಬೇಕೋ ಅಲ್ಲಿ ನಿಲ್ಲುವ ವ್ಯವಸ್ಥೆ ಆಗಬೇಕು, ನಿಲ್ದಾಣದಲ್ಲಿ ಉತ್ತಮ ಕ್ಯಾಂಟೀನ್ ವ್ಯವಸ್ಥೆಯೂ ಇಲ್ಲವಾಗಿದೆ. ಅನಧಿಕೃತವಾಗಿ ಚಿಕ್ಕಪುಟ್ಟ ಕ್ಯಾಂಟೀನ್ ತೆರೆದು ಪರಿಸರ ಕಲುಷಿತವಾಗುತ್ತಿದೆ. ಆ ಕಾರಣ ಉತ್ತಮವಾದ ಈ ಹೊಸ ಬಸ್ ನಿಲ್ದಾಣದಲ್ಲಿ ಉತ್ತಮ ರೀತಿಯ ಎಲ್ಲಾ ಸೌಲಭ್ಯ ವ್ಯವಸ್ಥೆಗಳು ಬೇಕಾಗಿದೆ. ಈ ಕುರಿತು ಸಚಿವರ ಗಮನ ಸೆಳೆಯುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಮಂಗಳೂರು ಬಸ್ ನಿಲ್ದಾಣದಲ್ಲಿ ರಿಕ್ಷಾ ಮತ್ತು ಇನ್ನಿತರ ವಾಹನಗಳು ಅಡ್ಡಾದಿಡ್ಡಿ ಪಾರ್ಕಿಂಗ್ ಮಾಡಿ ಪ್ರಯಾಣಿಕರಿಗೆ ತೊಂದರೆ ಕೊಡದಿರುವ ಬಗ್ಗೆ ತಿಳಿವಳಿಕೆ ನೀಡಲಾಗಿದೆ. ಬಸ್ ನಿಲ್ದಾಣದಲ್ಲಿ ಉಪಹಾರಗೃಹವನ್ನು ನಡೆಸುವ ಬಗ್ಗೆ ಆಸ್ಥೆಯೂ ಮಂಡಿಸಿರುತ್ತದೆ ಮತ್ತು ಕೆಲವು ಕಾಮಗಾರಿ ಕೆಲಸಗಳಾದ ನೀರು ಸರಬರಾಜು ನೀರು ಶೇಖರಿಸುವ ಓವರ್‌ಹೆಡ್ ಟ್ಯಾಂಕ್ ಇತ್ಯಾದಿಗಳು ಮುಗಿದನಂತರ ಉಪಹಾರ ಗೃಹವನ್ನು ತಕ್ಷಣವೇ ತೆರೆಯಲಾಗುವುದು. ಪ್ರಯಾಣಿಕರಿಗೆ ಬೇಕಾದ ಮಿಕ್ಕ ಎಲ್ಲಾ ಸೌಲಭ್ಯಗಳನ್ನು ಒದಗಿಸಲಾಗಿದೆ.